32

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.125/2015/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:14.6.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:**–ಶ್ರೀ ವೆಂಕಟೇಶ ಬಾಬು.ಟಿ.,ಗ್ರೂಪ್ 'ಡಿ'ನೌಕರ,ನಗರ ಸಭೆ, ದೊಡ್ಡಬಳ್ಳಾಪುರ,ಇವರು ಗಳಿಸಿರುವ ಅಕ್ರಮ ಆಸ್ತಿಯ ಬಗ್ಗೆ ಸೂಕ್ತ ಕಾನೂನು ಕ್ರಮ ಜರುಗಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ರಾಮಚಂದ್ರ, ತಂದೆ ಗಂಗರಾಮಯ್ಯ, ರೋಜಿಪುರ, ದೊಡ್ಡಬಳ್ಳಾಪುರ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ವೆಂಕಟೇಶ ಬಾಬು.ಟಿ., ತಂದೆ ತಾಯಪ್ಪ, ಗ್ರೂಪ್ ಡಿ ನೌಕರ, ನಗರ ಸಭೆ, ದೊಡ್ಡಬಳ್ಳಾಪುರ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ನಗರಸಭೆಯಲ್ಲಿ ಎದುರುದಾರರು ಪೌರಕಾರ್ಮಿಕರಾಗಿ(ಲೋಡರ್) ಕೆಲಸ ನಿರ್ವಹಿಸುತ್ತಿದ್ದು, ಆದರೆ ಕೆಲಸಕ್ಕೆ ಹಾಜರಾಗದೆ ಪ್ರತಿ ತಿಂಗಳು ಇ.ಎಸ್.ಟಿ.ನಿರ್ವಾಹಕರಾದ ಮಂಜುನಾಥ್ ಅವರ ಸಹಾಯದಿಂದ ಸಂಬಳ ಪಡೆಯುತ್ತಿದ್ದಾರೆ. ಎದುರುದಾರರು ರಿಯಲ್ ಎಸ್ಟೇಟ್ ನಿರ್ವಹಿಸುತ್ತಿದ್ದು, ಬಡ ಪೌರಕಾರ್ಮಿಕರೊಂದಿಗೆ ಮೀಟರ್ ಬಡ್ಡಿ ವ್ಯವಹಾರ ಮಾಡುತ್ತಾರೆ. ಬಡ ಪೌರ ಕಾರ್ಮಿಕರು ಇವರ ಬಡ್ಡಿ ಕಟ್ಟಲಾರದೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಪ್ರತಿ ತಿಂಗಳು ಪೌರ ಕಾರ್ಮಿಕರಿಗೆ ನೀಡುವ ಸಂಬಳದ ಚೆಕ್ಕನ್ನು ಎದುರುದಾರರೇ ಖುದ್ದಾಗಿ ಪಡೆದುಕೊಂಡು ವಿಜಯಾಬ್ಯಾಂಕ್ ದೊಡ್ಡಬಳ್ಳಾಪುರ ಶಾಖೆಯಲ್ಲಿ ಪಾವತಿಸಿ, ಎಟಿಎಂ ಮುಖಾಂತರ ಹಣ ಡ್ರಾ ಮಾಡಿಕೊಳ್ಳುತ್ತಾರೆ. ಎದುರುದಾರರು ಸುಮಾರು 60 ಲಕ್ಷ ರೂ.ಮೌಲ್ಯದ ಭವ್ಯ ಬಂಗಲೆಯನ್ನು ನಿರ್ಮಿಸುತ್ತಿದ್ದಾರೆ.

33

ಎದುರುದಾರರು ತಮ್ಮ ಹಾಗೂ ಪತ್ನಿಯ ಹೆಸರಿನಲ್ಲಿ ಈ ಕೆಳಗೆ ನಮೂದಿಸಿದ ಆಸ್ತಿಗಳನ್ನು ಮೀಟರ್ ಬಡ್ಡಿ ಕಟ್ಟಲಾರದ ಬಡ ಪೌರ ಕಾರ್ಮಿಕರಿಂದ ಪಡೆದುಕೊಂಡ ನಿವೇಶನಗಳಾಗಿರುತ್ತದೆ.

1) ಮಾರುತಿ ನಗರ 26ನೇ ವಾರ್ಡ್ ದೊಡ್ಡಬಳ್ಳಾಪುರದಲ್ಲಿ 60 ಲಕ್ಷದ ಮನೆ ನಿರ್ಮಾಣ ನಡೆಯುತ್ತಿದೆ(ಪೌರ ಕಾರ್ಮಿಕ ಪೆದ್ದಣ್ಣ ಅವರ ಮನೆ)
2) ಮಾರುತಿ ನಗರ 26ನೇ ವಾರ್ಡ್ ದೊಡ್ಡಬಳ್ಳಾಪುರದ ಮುಖ್ಯ ರಸ್ತೆ(ಮೇಸ್ತ್ರಿ ತಿಪ್ಪಣ್ಣನವರ ಮನೆ)
3) ಮಾರುತಿ ನಗರ 26ನೇ ವಾರ್ಡ್ ದೊಡ್ಡಬಳ್ಳಾಪುರದ ಟ್ಯಾಂಕ್ ಮುಂಭಾಗ ಇರುವ ಶೆಡ್ (ಪೌರಕಾರ್ಮಿಕ ಓಬಣ್ಣ ಅವರ ನಿವೇಶನ)
4) ಮಾರುತಿ ನಗರ 26ನೇ ವಾರ್ಡ್ ದೊಡ್ಡಬಳ್ಳಾಪುರದ 2ನೇ ಹಂತ(ಭದ್ರಣ್ಣನವರ ಮನೆ ರಸ್ತೆಯಲ್ಲಿರುವ ನೀರು ಸರಬರಾಜುಸಹಾಯಕ ದಿವಂಗತ ವೆಂಕಟೇಶ್ ಮನೆ)
5) ಶೇಣಿಗಾರ ಪೇಟೆಯಲ್ಲಿ ಹಳೇ ಬಸ್ಸು ನಿಲ್ದಾಣ ಹಿಂಭಾಗ 2 ಮನೆಗಳು ಇರುತ್ತವೆ.
6) ವಿನಾಯಕ ನಗರ 4ನೇ ವಾರ್ಡ್ ದೊಡ್ಡಬಳ್ಳಾಪುರ(ಪೌರ ಕಾರ್ಮಿಕಳಾದ ವಾಸಂತಿಯವರ ಮನೆ)
7) ಎರಡು ದ್ವಿಚಕ್ರ ವಾಹನಗಳಿರುತ್ತವೆ.
8) ಮಾರುತಿ ಓಮ್ನಿ ಕಾರ್ ಇರುತ್ತದೆ.
9) ಸಿದ್ದೇನಾಯಕನಹಳ್ಳಿ 5ನೇ ವಾರ್ಡ್ ದೊಡ್ಡಬಳ್ಳಾಪುರದಲ್ಲಿ ಖಾಲಿ ನಿವೇಶನ.
10) ಮಾರುತಿ ನಗರ 26ನೇ ವಾರ್ಡ ದೊಡ್ಡಬಳ್ಳಾಪುರದ ಕೋರ್ಟ್ ಮುಖ್ಯರಸ್ತೆ(ಪೌರ ಕಾರ್ಮಿಕ ಚಿಕ್ಕನರಸಿಂಹಯ್ಯನವರ ಮನೆ)

ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕೆ.ಸಿ.ಎಸ್.ಆರ್.1966ರ ನಿಯಮ 23ರ ಟಿಪ್ಪಣಿ 1 (1ನೇ ಉಪನಿಯಮದ) ಪ್ರಕಾರ ಡಿ.ಸಮೂಹದ ನೌಕರರಿಗೆ ಸಾಮಾನ್ಯವಾಗಿ ಅನ್ವಯವಾಗ ತಕ್ಕದ್ದಲ್ಲ ಎಂದು ಇರುತ್ತದೆ. ತಾವು ಡಿ.ಗ್ರೂಪ್ ನೌಕರರಾಗಿದ್ದು ಅನಕ್ಷರಸ್ಥರಾಗಿರುವುದರಿಂದ ಸರಿಯಾಗಿ ಓದಲು ಬರೆಯಲು ಬರುವುದಿಲ್ಲ ತನ್ನ ಹಾಗೂ ತನ್ನ ಕುಟುಂಬದ ಹೆಸರಿನಲ್ಲಿ ಆಸ್ತಿ ಖರೀದಿಸಲು ಇಲಾಖೆಯಿಂದ ಅನುಮತಿ ಪಡೆಯಬೇಕೆ/ಇಲ್ಲವೆ ಎಂಬುದರ ಬಗ್ಗೆ ಮತ್ತು ಆಸ್ತಿ ದಾಯಿತ್ವ ಪಟ್ಟಿ ಸಲ್ಲಿಸುವಂತೆ ಯಾವುದೇ ಸೂಚನೆ/ನಿರ್ದೇಶನ ನೀಡಿರುವುದಿಲ್ಲ. ಕರ್ನಾಟಕ ರಾಜ್ಯ ಪತ್ರ ಜುಲೈ 21.2016ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯದ ಅಧಿಸೂಚನೆ ಸಂ.ಸಿಆಸುಇ.90 ಸೇನಿಸಿ 2014 ದಿ.13.5.2016ರಲ್ಲಿ ನಿಯಮ 23ಕ್ಕೆ ತಿದ್ದುಪಡಿ ಮಾಡಿ ಕರ್ನಾಟಕ

S 2

ನಾಗರಿಕ ಸೇವಾ (ನಡತೆ) ನಿಯಮಗಳು 1966ರ ನಿಯಮ 23ರ ಉಪನಿಯಮ 1(ಡಿ) ಅಡಿಯಲ್ಲಿನ ಟಿಪ್ಪಣಿ 1ನ್ನು ಕೈಬಿಡಲಾಗಿದೆ ಎಂಬುದಾಗಿರುತ್ತದೆ. ಆದ್ದರಿಂದ ತನ್ನನ್ನು ಸದರಿ ಪ್ರಕರಣದಿಂದ ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

4. ಈ ಪ್ರಕರಣದಲ್ಲಿ ಎದುರುದಾರರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಆಪಾದನೆ ಇರುವುದರಿಂದ ಎಸ್.ಪಿ.ಕಲೋ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರು ತನಿಖಾ ವರದಿ ಸಲ್ಲಿಸಿದ್ದು ಅದರಲ್ಲಿ ಎದುರುದಾರರ ವಿರುದ್ಧ ಅಕ್ರಮ ಆಸ್ತಿ ಗಳಿಕೆ ಸಾಬೀತಾಗಿರುವುದಿಲ್ಲ, ಆದರೆ ಎದುರುದಾರರು ಕೆಲಸಕ್ಕೆ ಸೇರಿದಾಗಿನಿಂದ ಇಲಾಖೆಗೆ ಆಸ್ತಿ ಮತ್ತು ದಾಯಿತ್ವ ಪಟ್ಟಿ ಸಲ್ಲಿಸಿರುವುದಿಲ್ಲ ಹಾಗೂ ತಮ್ಮ ಮತ್ತು ಕುಟುಂಬದ ಹೆಸರಿನಲ್ಲಿ ಆಸ್ತಿ ಖರೀದಿಸಲು ಇಲಾಖಾ ಅನುಮತಿ ಪಡೆದಿರುವುದಿಲ್ಲ. ಈ ಬಗ್ಗೆ ಸೂಕ್ತ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಬಹುದಾಗಿದೆಯೆಂದು ಅಭಿಪ್ರಾಯ ಪಟ್ಟಿರುತ್ತಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

6. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ ದೂರಿನಲ್ಲಿ ನಮೂದಿಸಿರುವ ಆಸ್ತಿಗಳನ್ನು ಹೊಂದಿದ ಬಗ್ಗೆ ಎದುರುದಾರರು ನಿರಾಕರಿಸುವುದಿಲ್ಲ. ಆದರೆ ಎದುರುದಾರರು ಡಿ.ಗ್ರೂಪ್ ಉದ್ಯೋಗಿಯಾಗಿರುವುದರಿಂದ ಪ್ರತಿವರ್ಷ ಸರ್ಕಾರಿ ನೌಕರರು ಸಲ್ಲಿಸಬೇಕೆನ್ನುವ ಆಸ್ತಿ ದಾಯಿತ್ವ ಪಟ್ಟಿಯ ನಿಯಮ ತಮಗೆ ಅನ್ವಯಿಸುವುದಿಲ್ಲ, ಹಾಗೂ ತಾನು ಅನಕ್ಷರಸ್ಥನಾಗಿರುವುದರಿಂದ ತನ್ನ ಹಾಗೂ ತನ್ನ ಕುಟುಂಬದ ಹೆಸರಿನಲ್ಲಿ ಆಸ್ತಿ ಖರೀದಿಸಲು ಇಲಾಖೆಯಿಂದ ಪೂರ್ವಾನುಮತಿ ಪಡೆಯಬೇಕೆಂಬುದರ ಬಗ್ಗೆ ತನಗೆ ಯಾವುದೇ ನಿರ್ದೇಶನ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

7. ಕೆ.ಸಿ.ಎಸ್.ಆರ್.ನಿಯಮಾವಳಿಗಳು 1966 ನಿಯಮ 23ರ ಪ್ರಕಾರ ಪ್ರತಿಯೊಬ್ಬ ಸರ್ಕಾರಿ ನೌಕರ ಯಾವುದೇ ಸ್ಥಿರಾಸ್ತಿ ಖರೀದಿಸಲು ಇಲಾಖೆಯ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಡಿ ಗ್ರೂಪ್ ನೌಕರರು ಪ್ರತಿವರ್ಷ ಸಲ್ಲಿಸುವ ಆಸ್ತಿ ದಾಯಿತ್ವ ಪಟ್ಟಿಯಿಂದ 2013ರವರೆಗೆ ವಿನಾಯಿತಿ ನೀಡಲಾಗಿತ್ತು. ಆದರೆ 2013ರ ನಂತರ ಡಿ ಗ್ರೂಪ್ ನೌಕರರು ಸಹ ಪ್ರತಿವರ್ಷ ಆಸ್ತಿ ದಾಯಿತ್ವ ಪಟ್ಟಿ ಸಲ್ಲಿಸಬೇಕಾಗುತ್ತದೆ. ಆದ್ದರಿಂದ ಎದುರುದಾರರು

35

ತಮ್ಮ ಆಕ್ಷೇಪಣೆಯಲ್ಲಿ ಉಲ್ಲೇಖಿಸಿರುವಂತೆ ಕರ್ನಾಟಕ ರಾಜ್ಯ ಪತ್ರ ಜುಲೈ 21 2016ರ ಅಧಿಸೂಚನ ಸಂ.ಸಿಆಸುಇ 90 ಸೇನಿಸಿ 2014 ಬೆಂಗಳೂರು ದಿ.13.5.2016ರಲ್ಲಿ ನಿಯಮ 23ಕ್ಕೆ ತಿದ್ದುಪಡಿ ತಂದು ಉಪನಿಯಮ 1(ಡಿ)ಅಡಿಯಲ್ಲಿನ ಟಿಪ್ಪಣಿ 1ನ್ನು ಕೈಬಿಡಲಾಗಿದೆ ಎನ್ನುವ ಅಂಶ ಎದುರುದಾರರಿಗೆ ಅನ್ವಯಿಸುವುದಿಲ್ಲ.

8. ಎದುರುದಾರರು ಸರ್ಕಾರಿ ನೌಕರರಾಗಿರುವುದರಿಂದ ಪ್ರತಿವರ್ಷ ಆಸ್ತಿ ದಾಯಿತ್ವ ಪಟ್ಟಿ ಸಲ್ಲಿಸಬೇಕೆನ್ನುವ ಬಗ್ಗೆ ತನಗೆ ತಿಳುವಳಿಕೆ ಇರಲಿಲ್ಲ ಅಥವಾ ಇಲಾಖೆಯಿಂದ ತನಗೆ ನಿರ್ದೇಶನ ನೀಡಿಲ್ಲ ಎನ್ನುವ ಅಂಶ ಒಪ್ಪತಕ್ಕದ್ದಲ್ಲ. ತನಗೆ ಕೆಸಿಎಸ್ಆರ್ ನಿಯಮಾವಳಿ ಅಥವಾ ಬೇರೆ ಕಾನೂನುಗಳು ಗೊತ್ತಿಲ್ಲವೆಂಬ ಅಂಶದಿಂದ ಎದುರುದಾರರು ಬಚಾವಾಗಲು ಸಾಧ್ಯವಾಗುವುದಿಲ್ಲ. ಕಾನೂನಿನ ಅಜ್ಞಾನ ಕ್ಷಮಾರ್ಹವಲ್ಲವೆಂಬ ಅಂಶದಂತೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನಮೂದಿಸಿರುವ ಈ ಪ್ರತಿರಕ್ಷೆಗಳನ್ನು ಒಪ್ಪಲು ಅರ್ಹವಾಗಿರುವುದಿಲ್ಲ.

9. ಎದುರುದಾರರು ತನ್ನ ಹಾಗೂ ತನ್ನ ಹೆಂಡತಿ ಹೆಸರಿನಲ್ಲಿ ಸಾಕಷ್ಟು ಸ್ಥಿರಾಸ್ತಿಗಳನ್ನು ಹಾಗೂ ವಾಹನಗಳನ್ನು ಹೊಂದಿದ್ದು ಇವುಗಳ ಬಗ್ಗೆ ಇಲಾಖೆಯ ಪೂರ್ವಾನುಮತಿ ಪಡೆದ ಬಗ್ಗೆ ದಾಖಲೆಗಳಿರುವುದಿಲ್ಲ ಹಾಗೂ ಇವುಗಳಿಗೆ ಹಣಕಾಸಿನ ಮೂಲಗಳನ್ನು ತೃಪ್ತಿಕರವಾಗುವಂತೆ ವಿವರಿಸಿರುವುದಿಲ್ಲ. ತನಿಖಾಧಿಕಾರಿಗಳು ನೀಡಿದ ಎದುರುದಾರರ ಆದಾಯ, ಖರ್ಚು ಮತ್ತು ಆಸ್ತಿ, ಇವುಗಳು ತಾಳೆಯಾಗುವುದಿಲ್ಲ. ಕೆಲವು ಆಸ್ತಿಗಳು ಎದುರುದಾರರಿಗೆ ಯಾವ ಮೂಲದಿಂದ ಬಂದವು ಎನ್ನುವ ಬಗ್ಗೆ ಸೂಕ್ತ ದಾಖಲಾತಿಗಳು ಕಂಡುಬರುವುದಿಲ್ಲ.

10. ತನಿಖಾಧಿಕಾರಿಗಳ ವರದಿಯಲ್ಲಿ ವಿವರಿಸಿರುವಂತೆ ಎದುರುದಾರರು ಹಾಗೂ ಅವರ ಕುಟುಂಬದ ಆಸ್ತಿಗಳ ಆದಾಯ ಮತ್ತು ಖರ್ಚುಗಳ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಆಸ್ತಿಗಳ ವಿವರ | ಮೌಲ್ಯ |
|---|---|---|
| 1 | ದೊಡ್ಡಬಳ್ಳಾಪುರ ನಗರ 5ನೇ ವಾರ್ಡ್ 27ನೇ ಡಿವಿಷನ್, ಮಾರುತಿನಗರದ ನಗರ ಸಭಾ ಕ್ರಮ ಸಂಖ್ಯೆ 27, ನಗರ ಸಭಾ ಖಾತೆ ನಂ.1193/1082/6157/7ರಲ್ಲಿರುವ 30*20 ಅಡಿನಿವೇಶನ | 2,31,000/- |
| | ಮೇಲ್ಕಂಡ ನಿವೇಶನದಲ್ಲಿರುವ ಕಟ್ಟಡದ ಅಂದಾಜು ಮೌಲ್ಯ | 35,00,000/- |

36

| | | |
|---|---|---|
| 2 | ದೊಡ್ಡಬಳ್ಳಾಪುರ ನಗರ 5ನೇ ವಾರ್ಡ್ 26ನೇ ಡಿವಿಷನ್, ಮಾರುತಿನಗರದ ದಕ್ಷಿಣ ಭಾಗ ಅಡ್ಡ ರಸ್ತೆ, ನಗರ ಸಭಾ ಕ್ರಮ ಸಂಖ್ಯೆ 597, ಖಾತೆ ನಂ.847/1/5955/1ರಲ್ಲಿರುವ 18*35 ಅಡಿ ಅಳತೆಯ ನಿವೇಶನದಲ್ಲಿರುವ ಕಟ್ಟಡ | 6,24,000/- |
| 3 | ದೊಡ್ಡಬಳ್ಳಾಪುರ ನಗರ 5ನೇ ವಾರ್ಡ್ 26ನೇ ಡಿವಿಷನ್, ಕುಂಬಾರಪೇಟೆ ರಸ್ತೆ,ಮಾರುತಿನಗರದಕ್ಷಿಣ ಭಾಗದ ನಗರ ಸಭಾ ಕ್ರಮಾಂಕ 470ರಲ್ಲಿರುವ 30*40 ಅಡಿನಿವೇಶನ | 5,40,000/- |
| 4 | ದೊಡ್ಡಬಳ್ಳಾಪುರ ನಗರ 5ನೇ ವಾರ್ಡ್ 26ನೇ ಡಿವಿಷನ್, ಮಾರುತಿನಗರ ಅಡ್ಡರಸ್ತೆ ನಗರ ಸಭಾ ಖಾತೆ ನಂ.1057/6140ರಲ್ಲಿರುವ 20*15 ಅಡಿನಿವೇಶನ | 1,20,000/- |
| 5 | ಎದುರುದಾರರ ಹೆಸರಿನಲ್ಲಿರುವ ಕೆಎ – 43/ಎಂ.4805 ಮಾರುತಿ ಓಮ್ನಿ ವಾಹನದ ಮೌಲ್ಯ | 2,74,852/- |
| 6 | ಎದುರುದಾರರ ಹೆಸರಿನಲ್ಲಿರುವ ಹೀರೋ ಮೋಟಾರ್ ಸೈಕಲ್ ನಂ.ಕೆಎ-43/ಆರ್-7469 ವಾಹನದ ಮೌಲ್ಯ | 51,900/- |
| | ಅಂದಾಜು ಚಿನ್ನಾಭರಣ ಮತ್ತು ಗ್ರಹೋಪಯೋಗಿ ವಸ್ತುಗಳಮೌಲ್ಯ | 3,00,000/- |
| | **ಒಟ್ಟು** | 56,41,752/- |

ಎದುರುದಾರರು ಮತ್ತು ಅವರ ಕುಟುಂಬದವರಿಗೆ ಬಂದಿರುವ ಆದಾಯದ ವಿವರ

| ಕ್ರಮ ಸಂಖ್ಯೆ | ಆದಾಯದ ವಿವರ | ಮೌಲ್ಯ |
|---|---|---|
| 1 | ದಿ.1.9.2014ರಂದು ವಿಜಯಾ ಬ್ಯಾಂಕ್, ದೊಡ್ಡಬಳ್ಳಾಪುರ ಶಾಖೆಯಲ್ಲಿ ಶ್ರೀಮತಿ ಜ್ಯೋತಿರವರ ಹೆಸರಿನಲ್ಲಿ ಪಡೆದಿರುವ ಸಾಲ | 8,00,000-00 |
| 2 | ದೊಡ್ಡಬಳ್ಳಾಪುರದ 5ನೇ ವಾರ್ಡ್ 26ನೇ ಡಿವಿಷನ್, ಮಾರುತಿನಗರದ ದಕ್ಷಿಣ ಭಾಗ ಅಡ್ಡ ರಸ್ತೆ, ನಗರ ಸಭಾ ಕ್ರಮ ಸಂಖ್ಯೆ 597, ಖಾತೆ ನಂ.847/1/5955/1ರಲ್ಲಿರುವ 18*35 ಅಡಿ ಅಳತೆಯ ಆಸ್ತಿ ಮಾರಾಟ ಕರಾರು ಪತ್ರದ ಸಲುವಾಗಿ ಪಡೆದಿರುವ ಮುಂಗಡ ಹಣ | 8,00,000-00 |
| 3 | ದೊಡ್ಡಬಳ್ಳಾಪುರ ನಗರ 27ನೇ ವಾರ್ಡ್,ಮಾರುತಿನಗರ ಅಡ್ಡರಸ್ತೆ ನಗರ ಸಭಾ ಖಾತಾ ಕ್ರಮ ಸಂ.526ರಲ್ಲಿರುವ 30*20 ಅಡಿ ಅಳತೆಯ ನಿವೇಶನದ ಮಾರಾಟದ ಆದಾಯ | 4,15,000-00 |
| 4 | ಎದುರುದಾರರಿಗೆ ಅವರ ತಾಯಿಯ ಮರಣದ ಬಾಬ್ತು ಪುರಸಭೆ, ದೊಡ್ಡಬಳ್ಳಾಪುರದಿಂದ ಬಂದಿರುವ ಹಣ | 2,13,000-00<br>7,500-00 |

37

| | | |
|---|---|---|
| 5 | ಎದುರುದಾರರು ಅವರ ತಂದೆ ತಾಯಪ್ಪರವರಿಂದ ಚೆಕ್ ಮೂಲಕ ಪಡೆದಿರುವ ಆದಾಯ | 5,15,000–00 |
| 6 | ಎದುರುದಾರರ ಪತ್ನಿಯವರ ಹೆಸರಿನಲ್ಲಿರುವ ಕಟ್ಟಡದಿಂದ ಪಡೆದಿರುವ ಬಾಡಿಗೆ ಆದಾಯ(2013–14ರಿಂದ 2016–17ರವೆಗೆ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿರುವ ಮಾಹಿತಿಯಂತೆ) | 10,64,956–00 |
| 7 | ಎದುರುದಾರರ ವೇತನದ ಆದಾಯ | 15,81,141–00 |
| 8 | ಎದುರುದಾರರ ತಂದೆ ತಾಯಪ್ಪ ಅವರು ಪಡೆದಿರುವ ವೇತನ ಮತ್ತು ಪಿಂಚಣಿ ಅಂದಾಜು ಆದಾಯ | 10,00,000–00 |
| 9 | ಎದುರುದಾರರ ತಾಯಿ ಶ್ರೀಮತಿ ಮುನಿಯಮ್ಮರವರು ಪಡೆದಿರುವ ವೇತನ/ಪಿಂಚಣಿ ಅಂದಾಜು ಆದಾಯ | 10,00,000–00 |
| | ಒಟ್ಟು | 73,96,597–00 |

ಎದುರುದಾರರ ಮತ್ತು ಅವರ ಕುಟುಂಬದವರ ಅಂದಾಜು ಖರ್ಚಿನ ವಿವರ

| ಕ್ರಮ ಸಂಖ್ಯೆ | ವೆಚ್ಚದ ವಿವರ | ಮೌಲ್ಯ |
|---|---|---|
| 1 | ಆಸ್ತಿ ನೊಂದಣಿ ಮತ್ತು ನಿರ್ವಹಣಾ ವೆಚ್ಚ | 1,00,000/– |
| 2 | ವಾಹನಗಳ ನಿರ್ವಹಣಾ ವೆಚ್ಚ | 50,000/– |
| 3 | ಮಕ್ಕಳ ವಿದ್ಯಾಭ್ಯಾಸದ ಖಚು | 3,00,000/– |
| 4 | ಕುಟುಂಬ ನಿರ್ವಹಣೆ ಖರ್ಚು | 8,00,000/– |
| | **ಒಟ್ಟು ಖರ್ಚು** | 12,50,000/– |

**ಅಕ್ರಮ ಆಸ್ತಿಯ ಲೆಕ್ಕಾಚಾರ**

| ಕ್ರ.ಸಂ. | ವಿವರಗಳು | ಮೊತ್ತ |
|---|---|---|
| 1 | ಎದುರುದಾರರ & ಕುಟುಂಬದವರ ಆಸ್ತಿ ಮೌಲ್ಯ. | 56,41,752/– |
| 2 | ಪರಿಶೀಲನಾ ಅವಧಿಯಲ್ಲಿ ಮಾಡಿರುವ ಅಂದಾಜು ವೆಚ್ಚ | 12,50,000/– |
| 3 | ಪರಿಶೀಲನಾ ಅವಧಿಯಲ್ಲಿ ಗಳಿಸಿರುವ ಆಸ್ತಿ ಮತ್ತು ಮಾಡಿರುವ ಅಂದಾಜು ಖರ್ಚುಗಳ ಒಟ್ಟು ಮೊತ್ತ | 68,91,752/– |
| 4 | ಪರಿಶೀಲನಾ ಅವಧಿಯಲ್ಲಿ ಗಳಿಸಿರುವ ಆದಾಯ | 73,96,597/– |
| 5 | ಅಕ್ರಮ ಆಸ್ತಿ ಸಂಪಾದನೆ | 7,36,597/– |
| **ಶೇಕಡಾವಾರು ಅಕ್ರಮ ಆಸ್ತಿ(ಅಕ್ರಮ ಆಸ್ತಿ/ಗಳಿಸಿರುವ ಆದಾಯ*100)** | | –6.8% |

11. ಮೇಲ್ಕಾಣಿಸಿದ ಪಟ್ಟಿಯಲ್ಲಿ ಆದಾಯದ ವಿವರದ ಕ್ರಮಸಂಖ್ಯೆ 8 ಮತ್ತು 9 ರಲ್ಲಿ ನಮೂದಿಸಿರುವ ಆದಾಯದ ಮೂಲಗಳಿಗೆ ಸಮರ್ಥನೆ ಮಾಡುವಂತ ದಾಖಲಾತಿಗಳು

ಲಭ್ಯವಿರುವುದಿಲ್ಲ. ಎದುರುದಾರರ ತಂದೆ ಮತ್ತು ತಾಯಿ ಅವರ ಪಿಂಚಣಿಯಿಂದ ಬಂದ ಎಲ್ಲ ಹಣವನ್ನು ಎದುರುದಾರರಿಗೆ ನೀಡಿದ ಬಗ್ಗೆ ತನಿಖಾಧಿಕಾರಿಗಳು ವರದಿಯಲ್ಲಿ ಉಲ್ಲೇಖಿಸಿದ್ದು ಆದರೆ ಎದುರುದಾರರಿಗೆ ಒಬ್ಬ ಸಹೋದರ ಮತ್ತು ಸಹೋದರಿ ಸಹ ಇದ್ದು, ಅವರಿಗೆ ತಂದೆತಾಯಿಯ ಪಿಂಚಣಿಯಲ್ಲಿ ಏಕೆ ಹಣ ಕೊಡಲಿಲ್ಲ ಎನ್ನುವ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಆದ್ದರಿಂದ ಎದುರುದಾರರ ತಂದೆತಾಯಿ ಪಡೆದಿರುವ ವೇತನ ಮತ್ತು ಪಿಂಚಣಿಯ ಒಟ್ಟು ಆದಾಯ ಎದುರುದಾರರ ಆದಾಯದ ವಿವರದಲ್ಲಿ ತೋರಿಸಿರುವುದು ನಂಬಲರ್ಹವಾಗುವುದಿಲ್ಲ.

12. ಮೇಲ್ಕಾಣಿಸಿದ ಆದಾಯದ ಪಟ್ಟಿಯಲ್ಲಿ ಕ್ರಮಸಂಖ್ಯೆ 4 ಮತ್ತು 5ರಲ್ಲಿ ಎದುರುದಾರರ ತಂದೆ ತಾಯಿಯ ಮರಣದ ನಂತರ ಬಂದಿರುವ ಹಣದ ಬಗ್ಗೆ ದಾಖಲಾತಿಗಳು ಲಭ್ಯವಿದ್ದು ಪುನ: ಇವರ ವೇತನ ಮತ್ತು ಪಿಂಚಣಿಯಲ್ಲಿ ಕ್ರಮ ಸಂಖ್ಯೆ 8 ಮತ್ತು 9 ರಲ್ಲಿ ಪ್ರತ್ಯೇಕ ತಲಾ 10 ಲಕ್ಷ ರೂ.ಗಳ ಆದಾಯ ತೋರಿಸಿದ್ದು ಸಂಪೂರ್ಣ ಸುಳ್ಳು ಎನಿಸುತ್ತದೆ. ಏಕೆಂದರೆ ಈ ಬಗ್ಗೆ ಯಾವುದೇ ದಾಖಲಾತಿಗಳು ಲಭ್ಯವಿರುವುದಿಲ್ಲ. ಇದೇ ಪಟ್ಟಿಯಲ್ಲಿ ಕ್ರಮಸಂ.9ರಲ್ಲಿ ಎದುರುದಾರರ ಪತ್ನಿಯ ಹೆಸರಿನಲ್ಲಿರುವ ಕಟ್ಟಡದಿಂದ ಪಡೆದಿರುವ ಬಾಡಿಗೆ 10,64,956/- ಆದಾಯದ ಬಗ್ಗೆ ಯಾವುದೇ ದಾಖಲಾತಿಗಳು ಲಗತ್ತಿಸಿರುವುದಿಲ್ಲ. ಅಲ್ಲದೆ ಯಾವ ಕಟ್ಟಡದಿಂದ ಇವರು ಬಾಡಿಗೆ ಪಡೆಯುತ್ತಿದ್ದರು ಆ ಕಟ್ಟಡ ಯಾವ ಮೂಲದಿಂದ ಬಂದಿತು ಎನ್ನುವ ಬಗ್ಗೆ ಸಮರ್ಪಕ ದಾಖಲೆಗಳು ಲಭ್ಯವಿರುವುದಿಲ್ಲ.

13. ತನಿಖಾಧಿಕಾರಿಗಳ ವರದಿಯಂತೆ ಎದುರುದಾರರ ಹೆಂಡತಿ ಕೆಲವು ದಿನ ತರಕಾರಿ ವ್ಯಾಪಾರ ಆನಂತರ ಟೈಲರಿಂಗ್ ವೃತ್ತಿ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಆದರೆ ಇಂತಹ ವೃತ್ತಿ ಕೈಗೊಂಡ ಹೆಣ್ಣುಮಗಳು ಸಾಮಾನ್ಯವಾಗಿ ಈ ಆದಾಯದ ಮೇಲೆ ಆದಾಯ ತೆರಿಗೆ ಕಟ್ಟುವಷ್ಟು ಆದಾಯ ಹೊಂದಿರುವುದಿಲ್ಲ. ಆದರೆ ಎದುರುದಾರರ ಹೆಂಡತಿ ಶ್ರೀಮತಿ ಜ್ಯೋತಿ ಅವರು ಪ್ರತಿವರ್ಷ ಆದಾಯ ತೆರಿಗೆಯನ್ನು ಪಾವತಿಸಿ ಅತಿ ಶಿಸ್ತುಬದ್ಧವಾಗಿ ದಾಖಲೆಗಳನ್ನು ಸಲ್ಲಿಸಿದ್ದನ್ನು ನೋಡಿದರೆ ಇವರು ಮುಂದೊಂದು ದಿನ ಈ ಅಕ್ರಮ ಆಸ್ತಿಗಳ ಬಗ್ಗೆ ಯಾವುದಾದರೂ

39

ದೂರುಗಳು ಬಂದರೆ ಅದರಿಂದ ಬಚಾವಾಗಲು ದಾಖಲೆಗಳನ್ನು ಸೃಷ್ಟಿಸಿದ್ದಾರೆಂದು ಮೇಲ್ನೋಟಕ್ಕ ಕಂಡುಬರುತ್ತದೆ.

14. ದೂರಿನಲ್ಲಿ ಉಲ್ಲೇಖಿಸಿರುವ ಒಟ್ಟು 10 ಆಸ್ತಿಗಳ ಪಟ್ಟಿ ಇದ್ದು, ಆದರೆ ತನಿಖಾಧಿಕಾರಿಗಳು ಅವುಗಳಲ್ಲಿ ಕೇವಲ 6 ಆಸ್ತಿಗಳ ಬಗ್ಗೆ ಮಾತ್ರ ವಿವರಣೆ ನೀಡಿರುವುದರಿಂದ ಇನ್ನು ಕೆಲ ಆಸ್ತಿಗಳನ್ನು ತನಿಖೆಯಿಂದ ಕೈಬಿಟ್ಟಿದ್ದಾರೆಂದು ಕಂಡುಬರುತ್ತದೆ. ಎದುರುದಾರರೇ ಒಪ್ಪಿಕೊಂಡಿರುವಂತೆ ಆತನಿಗೆ ತನ್ನ ನೌಕರಿಯ ಆದಾಯ ಮತ್ತು ತಂದೆ ತಾಯಿಗಳ ವೇತನ ಮತ್ತು ಪಿಂಚಣಿ ಆದಾಯ ಸೇರಿ ಹೆಚ್ಚು ಕಡಿಮೆ 8 ರಿಂದ 9 ಲಕ್ಷ ರೂ.ಗಳು ಮಾತ್ರ ಬಂದಿದ್ದು, ಇಂತಹ ವ್ಯಕ್ತಿ ಸುಮಾರು 73,96,597/-ರೂ.ಗಳ ಆಸ್ತಿಯನ್ನು ಗಳಿಸಲು ಸಾಧ್ಯವಾಗುವುದಿಲ್ಲ. ದೂರುದಾರರು ಆಪಾದಿಸಿರುವಂತೆ ಎದುರುದಾರರು ಮೀಟರ್ ಬಡ್ಡಿಯಿಂದ, ತಮ್ಮ ಸಹಪಾಠಿಗಳಿಂದ ಸಾಲವಾಗಿ ನೀಡಿದ ಹಣದಲ್ಲಿ ಅಕ್ರಮವಾಗಿ ಅವರ ನಿವೇಶನಗಳನ್ನು ಪಡೆದುಕೊಂಡು ಅವುಗಳನ್ನು ಮಾರಾಟ ಮಾಡಿ ಆಸ್ತಿಯನ್ನು ಗಳಿಸಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

15. ಎದುರುದಾರರು 2 ದ್ವಿಚಕ್ರ ವಾಹನ, ಓಮ್ನಿ ಕಾರ್, ಸುಮಾರು 3 ಲಕ್ಷ ರೂ.ಗಳ ಚಿನ್ನಾಭರಣ ಮತ್ತು ಗ್ರಹೋಪಯೋಗಿ ವಸ್ತುಗಳನ್ನು ಹೊಂದಿದ ಬಗ್ಗೆ ಸಮರ್ಥನೀಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದರೆ ಎದುರುದಾರರ ಆದಾಯ ಮತ್ತು ಆಸ್ತಿಗಳನ್ನು ತೋರಿಸಲು ಸಮರ್ಪಕ ದಾಖಲೆಗಳಿಲ್ಲದಿದ್ದರೂ ಸಹಾ ತನಿಖಾಧಿಕಾರಿಗಳು ಎದುರುದಾರರಿಗೆ ಸಹಾಯ ಮಾಡುವ ರೀತಿಯಲ್ಲಿ ತನಿಖಾ ವರದಿ ಸಲ್ಲಿಸಿರುವುದು ಸೂಕ್ತವೆನಿಸುವುದಿಲ್ಲ.

16. ತನಿಖಾಧಿಕಾರಿಗಳ ವರದಿಯಲ್ಲಿ ಅಂತಿಮವಾಗಿ ಎದುರುದಾರರ ಆದಾಯ 73,96,597/-ರೂ.ಗಳೆಂದು ಆತನ ಆಸ್ತಿ ಮತ್ತು ಖರ್ಚು ವೆಚ್ಚಗಳು 68,91,752/-ರೂ.ಗಳೆಂದು ತೋರಿಸಿ ಇನ್ನು 7,36,597/-ರೂ.ಗಳ ಹೆಚ್ಚುವರಿ ಆದಾಯವಿದೆ, ಆ ಕಾರಣ ಯಾವುದೇ ಅಕ್ರಮ ಆಸ್ತಿ ಇರುವುದಿಲ್ಲವೆಂದು ನಮೂದಿಸಿರುವುದು ಒಪ್ಪಿಕೊಳ್ಳತಕ್ಕಂತಹದ್ದಲ್ಲ.

17. ದೂರುದಾರರು, ತನಿಖಾಧಿಕಾರಿಗಳು ಹಾಗೂ ಎದುರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಎದುರುದಾರರು ಹಾಗೂ ಅವರ ಕುಟುಂಬದವರು ಹೊಂದಿರುವ ಸ್ಥಿರಾಸ್ತಿಗಳ ವಿವರ ದಾಖಲೆಗಳ ಆಧಾರದ ಮೇಲೆ ಈ ಕೆಳಗಿನಂತಿರುತ್ತವೆ.

| ಕ್ರಮ ಸಂಖ್ಯೆ | ಅಸ್ತಿ ನಂ. | ಆಸ್ತಿಯ ಸ್ವರೂಪ | ಖರೀದಿಸಿದ ದಿನಾಂಕ | ಆಸ್ತಿಯ ಕಿಮ್ಮತ್ತು | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ |
|---|---|---|---|---|---|
| 1 | 1146 | ನಿವೇಶನ | 24.3.2014 | 1,20,000 | ಜ್ಯೋತಿ,(ಎದುರುದಾರರ ಹೆಂಡತಿ) |
| 2 | 53 | ನಿವೇಶನ | 7.12.2012 | 2,31,000 | ಜ್ಯೋತಿ, (ಎದುರುದಾರರ ಹೆಂಡತಿ) |
| 3 | 1163 | ನಿವೇಶನ | 30.1.2012 | 5,40,000 | ಜ್ಯೋತಿ, (ಎದುರುದಾರರ ಹೆಂಡತಿ) |
| 4 | 597 | ನಿವೇಶನ | 1.8.2014 | 6,24,000 | ಜ್ಯೋತಿ,(ಎದುರುದಾರರ ಹೆಂಡತಿ) |
| 5 | 53/6157 | ನಿವೇಶನ | 12.3.2014 | 4,15,000 | ಎದುರುದಾರರು ಮತ್ತು ಅವರ ಹೆಂಡತಿ ಜ್ಯೋತಿ, |
| 6 | 597/847 | ನಿವೇಶನ | 10.12.2015 | 16,25,000 | ಶ್ರೀಮತಿ ಜ್ಯೋತಿ,(ಎದುರುದಾರರ ಹೆಂಡತಿ) |
| 7 | 1193 | ಮನೆ | – | 35,00,000 | ಎದುರುದಾರರು ಮತ್ತು ಅವರ ಹೆಂಡತಿ ಜ್ಯೋತಿ. |
| ಆಸ್ತಿಯ ಒಟ್ಟು ಮೌಲ್ಯ | | | | 70,55,000 | |

ಎದುರುದಾರರ ಆದಾಯದ ವಿವರ ದಾಖಲಾತಿಗಳ ಆಧಾರದ ಮೇಲೆ ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಆದಾಯದ ಮೂಲ | ಪಡೆದ ಆದಾಯ |
|---|---|---|
| 1 | ಎದುರುದಾರರ ವೇತನ | 15,81,141/– |
| 2 | ಎದುರುದಾರರ ತಾಯಿಯವರ ಮರಣದ ನಂತರ ಇಲಾಖೆಯಿಂದ ಪಡೆದುಕೊಂಡ ಹಣ | 2,13,000<br>7,500/– |
| 3 | ಎದುರುದಾರರ ತಂದೆಯವರ ಇಲಾಖೆಯಿಂದ ಪಡೆದುಕೊಂಡ ಹಣ | 5,15,000/– |
| 4 | ದಿ.1.9.2014ರಂದು ವಿಜಯಾ ಬ್ಯಾಂಕ್ ದೊಡ್ಡಬಳ್ಳಾಪುರ ಅವರಲ್ಲಿ ಶ್ರೀಮತಿ ಜ್ಯೋತಿಯವರ ಹೆಸರಿನಲ್ಲಿ ಪಡೆದ ಸಾಲ | 8,00,000/– |
| | ಒಟ್ಟು ಆದಾಯ | 31,16,641/– |

ಎದುರುದಾರರ ಖರ್ಚಿನ ವಿವರಗಳು ಈ ಕೆಳಗಿನಂತಿವೆ.

| ಕ್ರಮ ಸಂಖ್ಯೆ | ವೆಚ್ಚದ ವಿವರ | ಮೌಲ್ಯ |
|---|---|---|
| 1 | ಆಸ್ತಿ ನೊಂದಣಿ ಮತ್ತು ನಿರ್ವಹಣಾ ವೆಚ್ಚ | 1,00,000/– |
| 2 | ವಾಹನಗಳ ನಿರ್ವಹಣಾ ವೆಚ್ಚ | 50,000/– |
| 3 | ಮಕ್ಕಳ ವಿದ್ಯಾಭ್ಯಾಸದ ಖಚು | 3,00,000/– |
| 4 | ಕುಟುಂಬ ನಿರ್ವಹಣೆ ಖರ್ಚು | 8,00,000/– |
| | ಒಟ್ಟು ಖರ್ಚು | 12,50,000/– |
| ಈ ಪಟ್ಟಿಯನ್ನು ತನಿಖಾಧಿಕಾರಿಗಳ ವರದಿಯಲ್ಲಿನ ಅಂಶಗಳ ಆಧಾರದ ಮೇಲೆ ಉಲ್ಲೇಖಿಸಲಾಗಿದೆ. | | |

41

ಆದ್ದರಿಂದ ಎದುರುದಾರರು ಗಳಿಸಿದ ಹೆಚ್ಚುವರಿ ಆಸ್ತಿಗಳು ಈ ಕೆಳಗಿನಂತಿದೆ.

| ಒಟ್ಟು ಆಸ್ತಿ ಮೌಲ್ಯ | ನಿವ್ವಳ ಆದಾಯ (ಒಟ್ಟು ಆದಾಯ– ಖರ್ಚುವೆಚ್ಚ =ನಿವ್ವಳ ಆದಾಯ) | ಅಕ್ರಮ ಆಸ್ತಿ ಮೌಲ್ಯ (ಒಟ್ಟು ಆಸ್ತಿ ಮೌಲ್ಯ–ನಿವ್ವಳ ಆದಾಯ=ಅಕ್ರಮ ಆಸ್ತಿ) |
|---|---|---|
| ರೂ. 70,55,000 | ರೂ. 18,66,641 | ರೂ. 51,88,359 |

ಆದ್ದರಿಂದ ಎದುರುದಾರರು ಒಟ್ಟು 51,88,359/– ರೂ.ಗಳ ಅಕ್ರಮ ಆಸ್ತಿ ಗಳಿಸಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

18. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರು ಗಳಿಸಿರುವ ಅಕ್ರಮ ಆಸ್ತಿಯ ಬಗ್ಗೆ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

19. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 14/6/17.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

14/6